**ದಿನಾಂಕಃ 12.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನನ್ನ ತಾತನ ಹೆಸರು ಹೊಂಬೇಗೌಡ ಎಂದರೆ ಸರಿ. ಹೊಂಬೇಗೌಡರಿಗೆ ಮೂರು ಜನ ಮಕ್ಕಳು ಎಂದರೆ ಸರಿ. ಮೊದಲನೇಯವರು ಹೊಂಬೇಗೌಡ, ಎರಡನೇಯವರು ಬೋರೆಗೌಡ ಹಾಗೂ ಮೂರನೇಯವರು ನನ್ನ ತಂದೆಯವರಾದ ಕೆಂಪೇಗೌಡ ಎಂದರೆ ಸರಿ. ನನ್ನ ತಂದೆ ಹಾಗೂ ಅವರ ಅಣ್ಣ ತಮ್ಮಂದಿರು ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ವಿಭಾಗದಂತೆ ಸರ್ವೆ ನಂ.73 ರಲ್ಲಿ 1.20 ಎಕರೆ, ಸರ್ವೆ ನಂ.92/1 ರಲ್ಲಿ 1.6 ಎಕರೆ, ಸರ್ವೆ ನಂ.82 ರಲ್ಲಿ 0.34 ಗುಂಟೆ ಹಾಗೂ ಸರ್ವೆ ನಂ.83/5 ರಲ್ಲಿ 23 ಗುಂಟೆ ಜಾಗ ನನ್ನ ತಂದೆಯ ಹೆಸರಿಗೆ ಬಂದಿರುತ್ತದೆಂದರೆ ಸರಿ. ಸದರಿ ವಿಭಾಗದಲ್ಲಿ 2 ಮನೆಗಳು ಸಹ ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆಂದರೆ ಸಾಕ್ಷಿಯ ಕೇವಲ 1 ಮನೆ ಬಂದಿದ್ದು ಮತ್ತೊಂದು ನನ್ನ ತಂದೆ ಖರೀದಿಸಿರುತ್ತಾರೆಂದು ನುಡಿಯುತ್ತಾರೆ. ಸದರಿ ವಿಭಾಗವೂ ನಾನು ಹುಟ್ಟುವ ಪೂರ್ವದಲ್ಲಿ ಆಗಿರುತ್ತದೆಂದರೆ ಸರಿ. ವಿಭಾಗದ ನಂತರ ನನ್ನ ತಂದೆಗೆ ಬಂದ ಆಸ್ತಿಗಳ ಹಿಸ್ಸೆಯು ಅವರ ಹೆಸರಿನಲ್ಲಿ ಖಾತೆ ಪಹಣಿ ಬರುತ್ತಿದೆ ಎಂದರೆ ಸಾಕ್ಷಿಯು 3 ಆಸ್ತಿಗಳ ಸಂಬಂಧ ಬರುತ್ತಿದೆ 2 ಬರುತ್ತಿಲ್ಲ ಎಂದು ನುಡಿಯುತ್ತ್ರಾರೆ.

2. ನನ್ನ ತಂದೆಗೆ ನಾವು ಮೂರು ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅದರಲ್ಲಿ ಸಣ್ಣಮ್ಮ ತೀರಿಕೊಂಡಿರುತ್ತ್ರಾರೆಂದರೆ ಸರಿ. ನನ್ನ ತಂದೆಯೇ ನಮ್ಮಗಳನ್ನು ಸಾಕಿ ಬೆಳೆಸಿರುತ್ತಾರೆಂದರೆ ಸರಿ. ಅದೇ ರೀತಿ ನನ್ನ ತಂದೆಯವರೇ ನಮ್ಮಗಳ ಮದುವೆ ಕಾರ್ಯವನ್ನು ಮಾಡಿಸಿರುತ್ತಾರೆಂದರೆ ಸರಿ. ನನ್ನ ತಂದೆಯವರು ವ್ಯವಸಾಯ ಮಾಡುತ್ತಾ ಕುರಿ ದನ ಹಾಗೂ ರೇಷ್ಮೆ ಬೆಳೆ ಮಾಡುತ್ತಿದ್ದರು. ನನ್ನ ತಂದೆಗೆ ವಿಭಾಗದಲ್ಲಿ ಬಂದ ಸ್ವತ್ತುಗಳು ನೀರಾವರಿ ಜಮೀನು ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ರೇಷ್ಮೆ, ರಾಗಿ, ಜೋಳ ಬೆಳೆಯುತ್ತೇವೆಂದರೆ ಸಾಕ್ಷಿಯು ರೇಷ್ಮೆ ಹಾಗೂ ರಾಗಿ ಹಾಕಿದ್ದಾರೆಂದು ನುಡಿಯುತ್ತಾರೆ. ನಾನು ಹಾಗೂ ವಾದಿ ಮತ್ತು ಪ್ರತಿವಾದಿಗಳು ನಮ್ಮಗಳ ಮದುವೆಯಾಗುವರೆಗೂ ಒಟ್ಟು ಕುಟುಂಬದಲ್ಲಿದ್ದೇವು ಎಂದರೆ ಸರಿ. ಹೆಣ್ಣು ಮಕ್ಕಳ ಮದುವೆಯಾದ ನಂತರ ನಾನು , 2ನೇ ಪ್ರತಿವಾದಿ ಹಾಗೂ ವಾದಿ ಒಟ್ಟು

ಕುಟುಂಬದಲ್ಲಿದ್ದೇವು ಎಂದರೆ ಸಾಕ್ಷಿಯು ನಾವುಗಳು ಬೇರೆ ಬೇರೆಯಾಗಿರುತ್ತೇವೆಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ನಾವು ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದೇವು ಎಂದರೆ ಸಾಕ್ಷಿಯು ವಾದಿಯು ಈಗ ಬೆಂಗಳೂರಿನಲ್ಲಿದ್ದರು ಎಂದು ನುಡಿಯುತ್ತಾರೆ.

3. ಬೆಂಗಳೂರಿಗೆ ವಾದಿಯು ಯಾವಾಗ ಹೋಗಿರುತ್ತಾರೆಂದರೆ ಸಾಕ್ಷಿಯು ನನಗೆ ನೆನಪಿಲ್ಲ, ನಾವು 30 ವರ್ಷಗಳ ಹಿಂದೆ ವಿಭಾಗವಾಗಿದ್ದು ಅದಕ್ಕೆ ಮುಂಚೆಯೇ ಅವರು ಬೆಂಗಳೂರಿಗೆ ಹೋಗಿರುತ್ತಾರೆಂದು ನುಡಿಯುತ್ತಾರೆ. ಸದರಿ ಜಮೀನುಗಳಲ್ಲಿ ಬೆಳೆಯುತ್ತಿದ್ದ ರಾಗಿ, ರೇಷ್ಮೆ ಇವುಗಳ ಆದಾಯದಿಂದ ಒಟ್ಟು ಕುಟುಂಬದ ಖರ್ಚು ವೆಚ್ಚಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಅದೇ ರೀತಿ ಒಟ್ಟು ಕುಟುಂಬದಲ್ಲಿ ಎಲ್ಲಾ ಖರ್ಚು ವೆಚ್ಚ ವ್ಯವಹಾರಗಳನ್ನು ಹಾಗೂ ಮದುವೆ ಇತ್ಯಾದಿ ಕಾರ್ಯವನ್ನು ನನ್ನ ತಂದೆಯಾದ 1ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿ ಒಟ್ಟು ಕುಟುಂಬದ ವ್ಯವಸಾಯದಲ್ಲಿ ಒಂದು ಎತ್ತಿನಗಾಡಿ ಸಹ ಇತ್ತು ಎಂದರೆ ಸರಿ. ಒಟ್ಟು ಕುಟುಂಬದಲ್ಲಿ ದನ, ಕುರಿ ಇವುಗಳೆಲ್ಲಾ ಇದ್ದವು ಎಂದರೆ ಸರಿ.

4. ನನ್ನ ತಂದೆ 2013 ರಲ್ಲಿ ತೀರಿಕೊಂಡಿರುತ್ತಾರೆಂದರೆ ನನಗೆ ನೆನಪಿಲ್ಲ. ನನ್ನ ತಂದೆಯ ಜೀವಿತಾ ಕಾಲದಲ್ಲಿ ಅವರು ಶಕ್ತಿಯುತರಾಗಿರುವವರೆಗೂ ಅವರೇ ಎಲ್ಲಾ ಒಟ್ಟು ಕುಟುಂಬದ ವ್ಯವಹಾರವನ್ನು ನೋಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಎಲ್ಲಾ ವಿಭಾಗವಾಗಿದ್ದು ನಾನು ನನ್ನ ತಂದೆ ತಾಯಿ ಒಂದು ಕುಟುಂಬದಲ್ಲಿದ್ದೇವು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ಮದುವೆ ಇತ್ಯಾದಿ ಕಾರ್ಯ ಆಗುವವರೆಗೂ ಅವರೇ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಕುರಿ, ಮೇಕೆ ಇವುಗಳ ಮಾರಾಟ ಹಾಗೂ ವ್ಯವಹಾರದ ಸಂಬಂಧ ನನ್ನ ತಂದೆಯೇ ಎಲ್ಲಾ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಮ್ಮ ಕುಟುಂಬದಲ್ಲಿದ್ದ ಎತ್ತುಗಳು ಹಾಗೂ ಎತ್ತಿನಗಾಡಿಯನ್ನು ನನ್ನ ತಂದೆ ಮಾರಾಟ ಮಾಡಿದ್ದಾರೆಂದರೆ ಸರಿ.

5. ಸದರಿ ವಿಭಾಗವೂ ಬರವಣಿಗೆ ಆಗಿರುವುದಿಲ್ಲ ಕೇವಲ ಬಾಯಿ ಮಾತಿನಲ್ಲಿ ಆಗಿರುತ್ತದೆ. ಅದರಂತೆ ಖಾತೆಯಾಗಿರುವುದಿಲ್ಲ. ಇವತ್ತಿಗೂ ಸಹ ನನ್ನ ತಂದೆಯ ಹೆಸರಿನಲ್ಲೆ ಎಲ್ಲಾ ಸ್ವತ್ತುಗಳ ಖಾತೆ ಇರುತ್ತದೆಂದರೆ ಸರಿ. ವಿಭಾಗದಂತೆ ನಮ್ಮಗಳ ಹೆಸರಿನಲ್ಲಿ ಖಾತೆ ಆಗಿರುವುದಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ವಿಭಾಗವಾಗದೇ ಇದ್ದರೂ ಸಹಿತ ಕೇವಲ ವಾದಿಗೆ ಭಾಗ ಕೊಡಬೇಕಾಗುತ್ತದೆಂಬ ಉದ್ದೇಶದಿಂದ ಈ ರೀತಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಗೆ ಸದರಿ ದಾವಾ ಸ್ವತ್ತುಗಳಿಂದ ಬರುವ ಆದಾಯವನ್ನು ಹೊರತು ಪಡಿಸಿ ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ಒಟ್ಟು ಕುಟುಂಬದ ಆದಾಯದಿಂದ ನನ್ನ ತಂದೆ 1ನೇ ದಾವಾ ಸ್ವತ್ತಿನ ಐಟಂನ್ನು ಖರೀದಿಸಿ ಅದರಂತೆ ಅವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸಾಕ್ಷಿಯು ನಾವು ಸಾಲ ಮಾಡಿ ತಂದುಕೊಟ್ಟ ಹಣದಲ್ಲಿ ಖರೀದಿ ಮಾಡಿರುತ್ತಾರೆಂದು ನುಡಿಯುತ್ತಾರೆ. ನನ್ನ ಹೆಂಡತಿಯ ಮನೆಯ ಕಡೆಯವರಿಂದ ಸಾಲ ಪಡೆದಿರುತ್ತೇವೆ. ಈ ರೀತಿ ಹೆಂಡತಿ ಮನೆಯಿಂದ ಸಾಲ ತೆಗೆದುಕೊಂಡು ಬಂದು ಖರೀದಿ ಮಾಡಿಸಿರುವ ಸಂಬಂಧ ಯಾವುದೇ ದಾಖಲೆ ಇರುವುದಿಲ್ಲ. 1ನೇ ಐಟಂ ದಾವಾ ಸ್ವತ್ತು ಕೂಡ ಒಟ್ಟು ಕುಟುಂಬದ ಸಂಪಾದನೆ ಹಾಗೂ ಆದಾಯದಲ್ಲಿ ಖರೀದಿಸಿದ ಆಸ್ತಿಯಾಗಿದ್ದರೂ ಸಹಿತ ಈ ರೀತಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

6. ಕೇವಲ 1ನೇ ದಾವಾ ಸ್ವತ್ತನ್ನು ಪಡೆದುಕೊಳ್ಳುವ ಉದ್ದೇಶದಿಂದ ದಿ:23.10.2008 ರ ಒಂದು ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ಸದರಿ ದಾನಪತ್ರದ ಸಂಬಂಧ ವಾದಿ ಹಾಗೂ 2ನೇ ಪ್ರತಿವಾದಿ 2008 ರಲ್ಲಿ ಈ ರೀತಿ ದಾನಪತ್ರವನ್ನು ಯಾಕೆ ಮಾಡಿರುವುದಾಗಿ ಪ್ರಶ್ನೆ ಮಾಡಿರುತ್ತಾರೆಂದರೆ ಸರಿಯಲ್ಲ. 2008 ರಲ್ಲಿ 1ನೇ ವಾದಿಯು ಸದರಿ ದಾವಾ ಸ್ವತ್ತುಗಳಲ್ಲಿ ತನಗೂ ಭಾಗ ಬರಬೇಕೆಂದು ನನ್ನ ತಂದೆಗೆ ಕೇಳಿರುತ್ತಾರೆಂದರೆ ಸರಿಯಲ್ಲ. ಸದರಿ ದಾವಾ ಐಟಂ ನಂ.1 ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಕಾರಣ ನನ್ನ ತಂದೆಗೆ ಅದನ್ನು ನನ್ನ ಹೆಸರಿಗೆ ದಾನಪತ್ರ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಕೇವಲ ವಾದಿಯ ಹಕ್ಕನ್ನು ಮೊಟಕುಗೊಳಿಸಲು ಈ ದಾನಪತ್ರವನ್ನು ಸೃಷ್ಟಿ ಮಾಡಲಾಗಿರುತ್ತದೆಂದರೆ ಸರಿಯಲ್ಲ.

7. ದಾವಾ ಸ್ವತ್ತು ಐಟಂ ನಂ.8 ಇದರ ಪಹಣಿ ನನ್ನ ತಾತನ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಗೆ ಸರ್ವೆ ನಂ.83/5 ರ ಪಹಣಿಯನ್ನು ವಾದಿಯ ಪರ ವಕೀಲರು ತೋರಿಸಲಾಗಿ ಸಾಕ್ಷಿಯು ನೋಡಿ ಒಪ್ಪಿ ಕೊಂಡಿದ್ದು ಅದನ್ನು ಈಗ ನಿಪಿ-12 ಎಂದು ಗುರುತಿಸಲಾಯಿತು. ನನ್ನ ತಂದೆಯ ಜೊತೆ ಸೇರಿ ನಾನು ಕೂಡ ಒಟ್ಟು ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಒಟ್ಟು ಕುಟುಂಬದ ಆದಾಯವನ್ನು ಹೊರತುಪಡಿಸಿ ನನಗೂ ಬೇರೆ ವರಮಾನ ಇರಲಿಲ್ಲ ಎಂದರೆ ಸರಿ. ನಾನು ರೇಷ್ಮೆ, ವ್ಯವಸಾಯ ಮಾಡುತ್ತಾ ದನ ಕುರಿಗಳನ್ನು ನೋಡಿಕೊಳ್ಳುತ್ತೇನೆ. ದಾವಾ ಸ್ವತ್ತು ಐಟಂ ನಂ.7 ರಲ್ಲಿ 20 ಗುಂಟೆ ಜಾಗವನ್ನು ನಾನು ಖರೀದಿ ಮಾಡಿರುತ್ತೇನೆಂದರೆ ಸರಿ. ಅದನ್ನು ಒಟ್ಟು ಕುಟುಂಬದ ಆದಾಯದಲ್ಲಿ ಖರೀದಿಸಿರುತ್ತೇನೆಂದರೆ ಸರಿಯಲ್ಲ.

8. ನನ್ನ ತಂದೆಯ ನಂತರ ನಾನೇ ಒಟ್ಟು ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದೇನೆಂದರೆ ಸಾಕ್ಷಿಯು ನನ್ನ ಭಾಗಕ್ಕೆ ಬಂದ ಆಸ್ತಿಗಳನ್ನು ಮಾತ್ರ ನೋಡಿಕೊಳ್ಳುತ್ತಿದ್ದೇನೆಂದು ನುಡಿಯುತ್ತಾರೆ. ದಾವಾ ಐಟಂ ನಂ.7 ಕೂಡ ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿ ವಾದಿಗೂ ಹಿಸ್ಸೆ ಬರಬೇಕು ಎಂದರೆ ಸರಿಯಲ್ಲ. ದಾನಪತ್ರವಾದ ಸಂದರ್ಭದಲ್ಲಿ ನನ್ನ ತಂದೆಗೆ ಸುಮಾರು 75 ವರ್ಷವಾಗಿತ್ತು ಎಂದರೆ ಸರಿ. ದಾನಪತ್ರ ಮಾಡುವ ಸಂದರ್ಭದಲ್ಲಿ ಅವರಿಗೆ ಅದರ ಬಗ್ಗೆ ಯಾವುದೇ ವಿಚಾರ ಅಥವಾ ಮಾಹಿತಿ ಇರಲಿಲ್ಲ ಅವರಿಗೆ ಏನೂ ತಿಳಿಯುತ್ತಾ ಇರಲಿಲ್ಲ ನಾನು ಕರೆದುಕೊಂಡು ಹೋಗಿ ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಯಾವುದೇ ವಿಭಾಗವಾಗದೇ ಇದ್ದರೂ ಸಹಿತ ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕೇವಲ ವಾದಿಗೆ ತನ್ನ ಹಿಸ್ಸೆ ಬರಬಾರದು ಎಂಬ ಕಾರಣಕ್ಕೆ ಈ ರೀತಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಾನಪತ್ರದ ಆಸ್ತಿಯನ್ನು ಖರೀದಿಸಲು ನಾನು ನನ್ನ ಹೆಂಡತಿಯ ಮನೆಯವರಿಂದ ಯಾವುದೇ ಹಣವನ್ನು ತಂದಿರಲಿಲ್ಲ ಆದರೂ ಸಹಿತ ಸದರಿ ನಿಡಿ-1 ನ್ನು ಈ ಸಂಬಂಧ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಮನೆಯ ಕಡೆಯಿಂದ ಹಣ ತಂದಿದ್ದೇ ಆದ್ದಲ್ಲಿ ಅವರ ಹೆಸರಿನಲ್ಲಿ ಅಥವಾ ನನ್ನ ಹೆಸರಿನಲ್ಲಿ ಮಾಡಿಸಿಕೊಳ್ಳಬೇಕಾಗಿತ್ತು ಎಂದರೆ

ಸಾಕ್ಷಿಯು ನನ್ನ ತಂದೆ ಹಿರಿಕರಾದ ಕಾರಣ ಅವರ ಹೆಸರಿನಲ್ಲಿ ಮಾಡಿಸಿದ್ದೆ ಎಂದು ನುಡಿಯುತ್ತಾರೆ. ಈ ಸಂಬಂಧ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

9. ಸದರಿ ದಾವಾ ಸ್ವತ್ತುಗಳಲ್ಲಿ ಯಾವುದೇ ವಿಭಾಗವಾಗಿರುವುದಿಲ್ಲ ಹಾಗೂ ಇದರಲ್ಲಿ ಕೇವಲ ನನಗೆ ಮಾತ್ರ ಹಕ್ಕು ಇರುವುದಿಲ್ಲ ವಾದಿಗಳಿಗೂ ಹಿಸ್ಸೆ ಬರಬೇಕಾಗಿರುತ್ತದೆ ಆದರೂ ಸಹಿತ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವುಗಳು ಇವತ್ತಿಗೂ ಸಹಿತ ಒಟ್ಟು ಕುಟುಂಬದಲ್ಲಿದ್ದೇವೆಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿ ಇರುವುದಿಲ್ಲ ಎಂದು ತೋರಿಸಲು ನಾನು ಯಾವುದೇ ದಾಖಲಾತಿ ಕೊಟ್ಟಿಲ್ಲ ಕೇವಲ ಬಾಯಿ ಮಾತಿನಲ್ಲಿ ವಿಭಾಗವಾಗಿರುತ್ತದೆಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡಿರುತ್ತಾರೆಂದರೆ ಸರಿ. ನನ್ನ ತಂದೆ ತೀರಿಕೊಂಡ ಮೇಲೆ ವಾದಿ, ನಾನು, ಪ್ರತಿವಾದಿ ನಂ.2, 3 ಮತ್ತು 5 ರವರು ಅವರ ವಾರಸುದಾರರು ಎಂದರೆ ಸರಿ. ಅದರಂತೆ ನಾವೆಲ್ಲರೂ ದಾವಾ ಸ್ವತ್ತುಗಳು ಸಮಾನ ಹಕ್ಕುದಾರರು ಎಂದರೆ ಸರಿಯಲ್ಲ. ಈ ಸಂಬಂಧ ಸುಳ್ಳು ಸಾಕ್ಯೆ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**